ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಮಂಗಳೂರು

PILIKULA DVELOPMENT AUTHORITY, MANGALURU

# ‘ವಿಶ್ವ ಓಝೋನ್ ದಿನಾಚರಣೆ’

## Celebration of

# INTERNATIONAL OZONE DAY

**Pilikula Development Authority, Mangaluru**

**Date: 16/09/2023**

ದಿನಾಂಕ 16.09.2023 ರಂದು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ‘ವಿಶ್ವ ಓಝೋನ್ ದಿನಾಚರಣೆ’ಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿ, ಮಂಗಳೂರು ಇವರ ಸಹಕಾರದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿ ಡಾ. ರವಿ ಡಿ. ಆರ್. ಇವರು ಗಿಡಕ್ಕೆ ನೀರು ಎರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕ ಡಾ. ಕೆ. ವಿ. ರಾವ್ ಅಧ್ಯಕ್ಷತೆ ವಹಿಸಿದ್ದರು. ಅಧ್ಯಾಪಕಿಯರಾದ ಶ್ರೀಮತಿ ಶಿಲ್ಪಾ, ಸರಕಾರಿ ಪ್ರೌಢ ಶಾಲೆ, ಮೂಡುಶೆಡ್ಡೆ ಮತ್ತು ಶ್ರೀಮತಿ ಸ್ಮಿತಾ, ಶುಭೋದಯ ವಿದ್ಯಾಲಯ, ಮೂಡುಶೆಡ್ಡೆ ಉಪಸ್ಥಿತರಿದ್ದರು.

ಓಝೋನ್ ದಿನಾಚರಣೆಯ ಉಪನ್ಯಾಸವನ್ನು ನೀಡುತ್ತಾ ಡಾ. ರವಿಯವರು ಓಝೋನ್ ಪದರದ ಮಹತ್ವ ಹಾಗೂ ಇತ್ತೀಚಿನ ವರ್ಷಗಳಲ್ಲಿ ಕೈಗಾರಿಕೆಗಳು, ಪರಿಸರ ಮಾಲಿನ್ಯ, ಪ್ಲಾಸ್ಟಿಕ್ ಬಳಕೆ ಇತ್ಯಾದಿಗಳಿಂದಾಗಿ ವಾತಾವರಣದ ಸಮತೋಲನೆ ತಪ್ಪಿ ಪ್ರಾಕೃತಿಕ ವಿಕೋಪಗಳು ಸಂಭವಿಸುತ್ತಿವೆ. ಈ ಹಾನಿಯನ್ನು ಭರಿಸಲು ವರ್ಷಗಳೇ ಬೇಕಾಗಬಹುದು. ಪರಿಸರವನ್ನು ಪ್ರೀತಿಸುವ ಅಭ್ಯಾಸವನ್ನು ಎಳವೆಯಿಂದ ರೂಢಿಸಿಕೊಂಡು ಸರಳ ಜೀವನವನ್ನು ನಡೆಸಿದಲ್ಲಿ ಮಾತ್ರ ಮುಂದಿನ ಜನಾಂಗ ಶಾಂತಿಯಿಂದ ಬಾಳಬಹುದು. ನೀರು, ಕಾಡು, ಮಣ್ಣು ಇವುಗಳಿಗೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಮಿತವಾಗಿ ಬಳಸಿ, ಪೋಷಿಸಿ, ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ ಎಂದು ಕರೆಯಿತ್ತರು.

ಉಪನ್ಯಾಸದ ನಂತರ ಭಾಗವಹಿಸಿದ ವಿದ್ಯಾರ್ಥಿಗಳಿಗೆ ‘ಓಪನ್ ಹೌಸ್ ರಸಪ್ರಶ್ನೆ’ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ದಿನಾಚರಣೆಯಲ್ಲಿ ಪ್ರೌಢ ಶಾಲೆಗಳ ಸುಮಾರು 200 ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು.




**Inauguration by Dr.Ravi, Senior Environment Officer, KSPCB, Mangaluru**



